ಹುಬ್ಬಳ್ಳಿ ನಗರದಲ್ಲಿ ಭಾರಿ ಕೈಗಾರಿಕೆಗಳು

1258 (1510) ಶ್ರೀ ಹೊನ್ನಾಳಿ ಜಬ್ಬರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ ನಗರದಲ್ಲಿನ ಕೆಲವು, ಸಾರಿ ಕೈಗಾರಿಕೆಗಳು ಇತ್ತೀಚೆಗೆ ಮುಚ್ಚಲ್ಪಟ್ಟಿರುವುದರಿಂದ ಅಲ್ಲಿನ ಕಾರ್ಮಿಕರು ಬೀದಿ ಪಾಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ ಸದರಿ ಕಾರ್ಮಿಕರ ಪುನರ್ ವಸತಿಗಾಗಿ ಸರ್ಕಾರದ ಯಾವ ಕ್ರಮಗಳನ್ನು ಕೈಗೊಂಡಿದೆ ?

ಶ್ರೀ ಎ.ಎಂ. ಹಿಂಡಸಗೇರಿ(ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಹುಬ್ಬಳ್ಳಿ ನಗರದಲ್ಲಿ ಭಾರಿ ಕೈಗಾರಿಕೆಗಳು ಇತ್ತೀಚೆಗೆ ಮುಚ್ಚಲ್ಪಟ್ಟಿರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ವಿಧಾನಮಂಡಲದ ಸಮಿತಿಗಳ ಶಿಫಾರಸ್ಸುಗಳ ಬಗ್ಗೆ ವಿವಿಧ ಇಲಾಖೆಗಳು ತೆಗೆದುಕೊಂಡ ಕ್ರಮ

1259 (1477) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. ಕಳೆದ ಮೂರು ವರ್ಷಗಳಿಂದ ವಿಧಾನಮಂಡಲದ ಸಮಿತಿಗಳು ವಿವಿಧ ಇಲಾಖೆಗಳ ಬಗ್ಗೆ ನೀಡಲಾದ ಕ್ರೋಢಿಕೃತ ಸಾಮಾನ್ಯ ಶಿಫಾರಸ್ಸುಗಳ ಬಗ್ಗೆ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ತೆಗೆದುಕೊಂಡ ಕ್ರಮಗಳು?

2. ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಗೆ ಸಾಕಷ್ಟು ಸಿಬ್ಬಂದಿ ಒದಗಿಸಿದೆಯೇ?

3. ಇಲ್ಲದಿದ್ದಲ್ಲಿ ಅದಕ್ಕೆ ಕಾರಣಗಳನ್ನು ನೀಡುವುದು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

1. 1996ರಲ್ಲಿ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯು ಕಾನೂನು ಇಲಾಖೆಯಿಂದ ಪ್ರತ್ಯೇಕಗೊಂಡು ಸ್ವತಂತ್ರ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ವಿಧಾನ ಮಂಡಲದ ಸಮಿತಿಗಳ ಸಾಮಾನ್ಯ ಶಿಫಾರಸ್ಸುಗಳ ಬಗ್ಗೆ ವಿವಿಧ ಇಲಾಖೆಗಳು ತೆಗೆದುಕೊಳ್ಳುವ ಕ್ರಮಗಳ ಬಗ್ಗೆ ಸಮನ್ವಯ ಕಾರ್ಯ ನಿರ್ವಹಿಸುವುದು ಈ ಇಲಾಖೆಯ ಒಂದು ಕಾರ್ಯಭಾಗವಾಗಿರುತ್ತದೆ. ವಿವಿಧ ಸಮಿತಿಗಳಿಂದ ಬಂದ ಶಿಫಾರಸ್ಸುಗಳಲ್ಲಿ ಸಾಮಾನ್ಯವಾದ ಶಿಫಾರಸ್ಸುಗಳ ಬಗ್ಗೆಯೂ ಸಚಿವಾಲಯದ ಎಲ್ಲಾ ಇಲಾಖೆಗಳಿಗೆ ತಿಳಿಸಿ ಈ ಬಗ್ಗೆ ತೆಗೆದುಕೊಂಡ ಕ್ರಮವನ್ನು ವಿಧಾನ ಮಂಡಲಕ್ಕೆ ತಿಳಿಸುವಂತೆ ಸದರಿ ಇಲಾಖೆಗಳಿಗೆ ಸೂಚಿಸಲಾಗಿದೆ.

2. ಕಾನೂನು ಇಲಾಖೆಯ ಅಡಿಯಲ್ಲಿ ಇದ್ದಾಗ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆಯ ಕಾರ್ಯವನ್ನು ನಿರ್ವಹಿಸುತ್ತಿದ್ದ ಪ್ರಾರೂಪಣಾ ವಿಭಾಗವನ್ನೇ ಹಾಗೂ ಆ ದಿನ ಇದ್ದ ಅಧಿಕಾರಿ ಮತ್ತು ಸಿಬ್ಬಂದಿ ವರ್ಗದವರನ್ನೇ ಪ್ರತ್ಯೇಕಿಸಿ ಈ ಇಲಾಖೆಯನ್ನು ಅಸ್ತಿತ್ವಗೊಳಿಸಲಾಗಿದೆ. ಇಂತಹ ಕಾರ್ಯ ನಿರ್ವಹಿಸಲು ಹೊಸದಾಗಿ ಸಿಬ್ಬಂದಿಯನ್ನು ಪ್ರತ್ಯೇಕವಾಗಿ ಒದಗಿಸಿರುವುದಿಲ್ಲ.

3. ಸಮನ್ವಯ ಕಾರ್ಯಕ್ಕೆ ಹೆಚ್ಚಿನ ಸಿಬ್ಬಂದಿಯ ಅಗತ್ಯವಿರುವುದಿಲ್ಲ.

ಹುಬ್ಬಳ್ಳಿ- ಧಾರವಾಡ ಮಹಾನಗರದ ಬೀಡಿ ಕಾರ್ಮಿರಕ ಕನಿಷ್ಠ ಕೂಲಿ ಮತ್ತು ನಿವೇಶನ

1261 (1512) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹುಬ್ಬಳ್ಳಿ- ಧಾರವಾಡ ಮಹಾನಗರಗಳಲ್ಲಿ ಬೀಡಿ ಕಾರ್ಮಿಕರನ್ನು ಸಮೀಕ್ಷೆ ನಡೆಸಿ ಗುರುತಿಸಲಾಗಿದೆಯೆ?

ಆ) ಹಾಗಿದ್ದಲ್ಲಿ, ಅವರುಗಳ ಸಂಖ್ಯೆ ಎಷ್ಟು? ಇವರಿಗೆ ಮನೆ, ನಿವೇಶನಗಳನ್ನು ಸರ್ಕಾರ ಒದಗಿಸಲು ಹಾಕಿಕೊಂಡಿರುವ ಯೋಜನೆಗಳಾವುವು?

ಇ) ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿಯನ್ನು ನಿಗಧಿಪಡಿಸಲಾಗಿದೆಯೆ? ನಿಗಧಿಪಡಿಸಿದಲ್ಲಿ, ಕೂಲಿ ಎಷ್ಟು?

ಈ) ಈಗ ನಿಗಧಿಪಡಿಸಿರುವ ಕೂಲಿಯನ್ನು ಎಂದಿನಿಂದ ಪುನರ್ ವಿಮರ್ಶಿಸಲಾಗುವುದು?

ಉ) ಪುನರ್ ವಿಮರ್ಶಿಸುವ ದಿನಾಂಕ ಮುಗಿದಿದ್ದರೆ ಸರ್ಕಾರ ಪುನಃ ಯಾವಾಗ ಪುನರ್ ನಿಗಧಿಪಡಿಸುವುದು.

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಹೌದು

ಆ) 1080, ಬೀಡಿ ಕಾರ್ಮಿಕರಿಗೆ ವಸತಿ ಒದಗಿಸುವ ಯೋಜನೆ ಕೇಂದ್ರ ಸರ್ಕಾರದ ಯೋಜನೆಯಾಗಿರುತ್ತದೆ. ರಾಜ್ಯದಲ್ಲಿ ಇವರುಗಳಿಗೆ ಯಾವುದೇ ಪ್ರತ್ಯೇಕ ಯೋಜನೆಗಳು ಇರುವುದಿಲ್ಲ.

ಇ) ಹೌದು. ಪ್ರತಿ ಸಾವಿ ಬೀಡಿ ಸುತ್ತಲು ನಿಗಧಿ ಪಡಿಸಿರುವ ಕನಿಷ್ಠ ವೇತನ

ಮೂಲ ವೇತನ	ರೂ. 36. 85
ತುಟ್ಟಿಭತ್ಯೆ	ರೂ. 21. 33

ಒಟ್ಟು	**ರೂ. 58. 18**